23.06.2018

ಸಾಕ್ಷಿ ಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ  ವಕೀಲರಿಂದಃ

ದಿಃ 3/5/12 ರಂದು ನೊಂದಾಯಿತ ಒಪ್ಪಂದ ಕರಾರು ಜಪತ್ರ ವನ್ನು 1 ರಿಂದ 6 ನೇ ಪ್ರತಿವಾದಿಗಳು ನನ್ನ ಹೆಸರಿಗೆ ಬರೆದುಕೊಟ್ಟಿದ್ದು ಅದನ್ನು ನಿಪಿ1 ಎಂದು ಗುರುತಿಸಲಾಯಿತು.  1 ರಿಂದ 4 ನೇ ಪ್ರತಿವಾದಿಗಳ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.  ಸಾಂಕೇತಿಕವಾಗಿ ಕೊನೆ ಪುಟದಲ್ಲಿರುವ ಪ್ರತಿವಾದಿಗಳ ಸಹಿಗಳನ್ನು ನಿಪಿ1 ಎ ರಿಂದ ಡಿ ಎಂದು ಗುರುತಿಸಲಾಯಿತು.  ಹಾಗೂ 5 ಮತ್ತು 6 ನೇ ಪ್ರತಿವಾದಿಗಳು ಅಪ್ರಾಪ್ತ ವಯಸ್ಕರಾದ ಕಾರಣ 1 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ.  ಕಾರಣ ಅವರ ಸಹಿಯನ್ನು ನಿಪಿ1 ಇ ಎಂದು ಗುರುತಿಸಲಾಯಿತು.  ವಾದಿಯ ಸಹಿಯನ್ನು 1 ಎಫ್ ಎಂದು ಗುರುತಿಸಲಾಯಿತು.  ಮಂಜುನಾಥ ಮತ್ತು ಸುರೇಶ ಎಂಬುವರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ.  ಎರಡು ಪಹಣಿ ಪತ್ರಿಕೆ ನಿಪಿ2 ಮತ್ತು 3, ಮ್ಯುಟೇಶನ್ ಎಕ್ಸ್ ಟ್ರಾಕ್ಟ್ಸ್ ನಿಪಿ4,  ನಕಾಶೆ ನಿಪಿ5, ಕ್ರಯಪತ್ರದ ದೃಡೀಕೃತ ನಕಲು ನಿಪಿ6,

25/8/15 ರ ತಿಳುವಳಿಕೆ ಪತ್ರವನ್ನು ನಿಪಿ 7, ಮೂರು ಅಂಚೆ ಲಕೋಟೆಗಳು ನಿಪಿ 8 ರಿಂದ 10, ಒಂದು ಅಂಚೆ ಕಾರ್ಡನ್ನು ನಿಪಿ11 ಎಂದು ಗುರುತಿಸಲಾಯಿತು. ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ.

ಪಾಟೀ ಸವಾಲುಃ ಸಮಯ ಕೋರುತ್ತಾರೆ, ಕಾರಣ ಸಮಯ ನೀಡಿ ಮುಂದೂಡಲಾಯಿತು.

ತೆ ನ್ಯಾ ನ ಉ ಬೆ ಮಾ

ಓ ಹೇ ಕೇ ಸ ಇ ಒ

ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ